ಜೈನ್ ಕಾಲೇಜ್, ಜಯನಗರ.

ದ್ವಿತೀಯ ಪಿ.ಯು.ಸಿ – ಮಾದರಿ ಪ್ರಶ್ನೆ ಪತ್ರಿಕೆ (02) ಜನವರಿ – 2020

ಸಮಯ : 3.15 ಗಂಟೆ | ವಿಷಯ:– ಕನ್ನಡ | ಅಂಕಗಳು–100

ಅ–ವಿಭಾಗ

**I ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **10x1=10**

1. ತಾನು ಯಾರನ್ನು ಕೊಲ್ಲುವುದಿಲ್ಲ ಎಂದು ವಿದ್ಯಾದೇವತೆ ಹೇಳಿತು?
2. ತತ್ವಜ್ಞಾನವನ್ನು ಕೇಳದವರಾರು?
3. ಮೊಮ್ಮಗಳು ಏನು ಮಾಡುತ್ತಿದ್ದಳು?
4. ಕವಯಿತ್ರಿ ಯಾರಲ್ಲಿ ಮೊರೆ ಇಡುತ್ತಾರೆ?
5. ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ಯಾವುದು?
6. ಕಲಾಂ ಅವರು ಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು?
7. ಲೋಕಲ್ ಸುದ್ದಿಗಳಿಗೆ ಎಲ್ಲಿ ಪ್ರಾಶಸ್ತ್ಯವಿದೆ ?
8. ನಿರೂಪಕರ ಕೊಡಲಿಯ ಆಕಾರ ಹೇಗಿತ್ತು?
9. ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತು?
10. ಪುಟ್ಟಯ್ಯ ಯಾರು?

ಆ–ವಿಭಾಗ

**II ಅ. ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **4x2=8**

11. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?
12. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?
13. ಮಗು ಏನೇನು ಕಲಿಯಿತು?
14. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?
15. ಹತ್ತಿಯ ಬೀಜ ಲೋಕದ ಹಿತಕ್ಕೆ ತನ್ನನ್ನು ಹೇಗೆ ಸುಟ್ಟುಕೊಳ್ಳುತ್ತದೆ ?

**ಆ. ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **3x2=6**

16. ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಯಾವುದು?
17. ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು?
18. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?
19. ಹಳ್ಳಿಯ ಚಹಾದಂಗಡಿಯನ್ನು ಪರಿಚಯಿಸಿ.

**ಇ. ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **3x2=6**

20. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸವಾದುದೇಕೆ?
21. ಆನೆ ರೆಹಮಾನನ ಅಂಗಡಿಯನ್ನು ಬೀಳಿಸಿದ ಸಂದರ್ಭವನ್ನು ಚಿತ್ರಿಸಿ.
22. ದುರ್ಗಪ್ಪನಿಗೆ ಲೈನ್‌ಮೆನ್ ಕೆಲಸ ರೋಸಿ ಹೋಗಲು ಕಾರಣವೇನು?
23. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?ವಿವರಿಸಿ.

ಇ–ವಿಭಾಗ

**III ಅ. ಕೆಳಗಿನ ಎರಡಕ್ಕೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **2x3=6**

24. ತಾನೆ ಲಘು ಮಾಡಿ ಲಘುವಾದನಯ್ಯ.
25. ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕ್ಕೆ
26. ಜ್ಯೋತಿ ನಿನ್ನಾರ್‍ಯರ ಹೋಲರ.

**ಆ. ಕೆಳಗಿನ ಒಂದಕ್ಕೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **1x3=3**

27. ಆಪರೇಷನ್ ಆಗಬೇಕು ಪರವಾಗಿಲ್ಲವಾ?
28. ಇದೇ ಲೋಟವಲ್ಲವೇ.... ತನ್ನ ಬೆವರಿನ ಬೆಲೆ ಕಳೆದದ್ದು.

ಇ. ಕೆಳಗಿನ ಒಂದಕ್ಕೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **1x3=3**

29. ಅದನ್ನು ಸುತ್ತಿಗೆ ಎಂದು ಸಹ ಕರೆಯಬಹುದಿತ್ತು.
30. ಆನೆ ಜೊತೆ ಮಲಗುತ್ತೀಯಾ; ನೀನ್ಯಾವ ಗಂಡಸು.

**ಈ–ವಿಭಾಗ**

**IV** ಅ. ಕೆಳಗಿನ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : **3x4=12**

31. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.
32. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.
33. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.
34. ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

ಆ. ಕೆಳಗಿನ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : **2x4=8**

35. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ?
36. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿ.
37. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

ಇ. ಕೆಳಗಿನ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : **2x4=8**

38. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.
39. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದ?
40. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸಿದ್ದಾನೆ?

**ಉ–ವಿಭಾಗ**

**V** ಅ. ಈ ಕೆಳಗಿನ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ: **1x5=5**

41. ಮಂದೆಗೆಳೆಸಿದ ಪಾಪಿ ಕೌರವ
ನಂದು ಮುಂದಲೆವಿಡಿದು ಸೈಂಧವ
ಬಂದು ಬಳಿಕಾರಣ್ಯದೊಳೆನ್ನನೆಳದೊಯ್ದ
ಇಂದು ಕೀಚಕ ನಾಯ ಕಾಲಲಿ
ನೊಂದೆ ನಾನೀ ಮೂರು ಬಾರಿಯೆ
ಬಂದ ಭಂಗವೇ ಸಾಕೆನುತೆ ಬಸವಳಿದಳಿಂದುಮುಖಿ

42. ಯಾವಾಗೋ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನ ಕೇಳಿ
ಮೊದಲಾಗಲೀಗ ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ

ಆ. ಭಾಷಾಭ್ಯಾಸ: ಈ ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ : **6x2=12**

43. ಈ ಪದಗಳಿಗೆ ತತ್ಸಮ ತದ್ಭವ ಬರೆಯಿರಿ : ಅಟವಿ, ವಿದ್ಯೆ
44. ಈ ಪದಗಳಿಗೆ ನಾನಾರ್ಥ ಬರೆಯಿರಿ: ಕಲಿ, ಹೊಳೆ
45. ಈ ಕ್ರಿಯಾಪದಗಳ ಕಾಲ ತಿಳಿಸಿ ಓಡಿದರು, ಬರುತ್ತಿದ್ದರು
46. ಈ ಪದಗಳ ವಿಭಕ್ತಿ ಪ್ರತ್ಯಯವನ್ನು ಬರೆಯಿರಿ: ಧರೆಯೊಳ್, ಮೆಲ್ನುಡಿಯಿಂ
47. ಈ ದ್ವಿರುಕ್ತಿಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ: ಕಟ್ಟಕಡೆಗೆ, ಮೆಲ್ಲಮೆಲ್ಲನೆ.
48. ಈ ಪದಗಳ ನಿಶೇಧರೂಪ ಬರೆಯಿರಿ: ತಿಂದರು, ಹಾಡುವಳು
49. ಈ ಕ್ರಿಯಾಪದಗಳ ಧಾತು ರೂಪ ತಿಳಿಸಿ. ಕಂಡರು, ಹೇಳಿದಾಗ

ಇ. ಕೆಳಗಿನ ಒಂದು ಪ್ರಶ್ನೆಗೆ ಪ್ರಬಂಧ ಬರೆಯಿರಿ: **1x5=5**

50. ಕೃಷಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅತ್ಯಗತ್ಯ.
51. ಮಾತೃ ಭಾಷೆಯಲ್ಲಿ ಶಿಕ್ಷಣ

ಈ. ಕೆಳಗಿನ ಒಂದು ಪ್ರಶ್ನೆಗೆ ಪತ್ರಲೇಖನ ಬರೆಯಿರಿ: **1x4=4**

52. ನಿಮ್ಮ ಹುಟ್ಟು ಹಬ್ಬಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ/ತಿಗೆ ಪತ್ರ ಬರೆಯಿರಿ.
53. ನಿಮ್ಮ ಬಡಾವಣೆಯ ಬೀದಿ ದೀಪಗಳ ದುರಸ್ಥಿ ಕುರಿತು ಬೆಸ್ಕಾಂನ ಅಭಿಯಂತರರಿಗೊಂದು ಪತ್ರ ಬರೆಯಿರಿ

ಉ. ಈ ಕೆಳಗಿನ ಗಾದೆಯೊಂದನ್ನು ವಿಸ್ತರಿಸಿ ಬರೆಯಿರಿ **1x4=4**

54. ದೇಶ ಸುತ್ತುಬೇಕು, ಕೋಶ ಓದಬೇಕು.
55. ಮಾತೇ ಮುತ್ತು, ಮಾತೇ ಮೃತ್ಯು.